## ಅನುವಂಶೀಯ ರೋಗ ಪತ್ತೆ ಸುಲಭ!

ಅನುವಂಶೀಯತೆಗೆ ಕಾರಣವಾಗುವ ವರ್ಣತಂತುಗಳು ಕೆಲವು ಭಯಾನಕ ರೋಗಗಳನ್ನು ಬಳುವಳಿಯಾಗಿ ತರುತ್ತವೆ. ಇದನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವ ತಂತ್ರವನ್ನು ಭಾರತೀಯ ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ.

ಕ್ಯಾನ್ಸರ್ ಸೇರಿದಂತೆ ಕುಷ್ಠ ರೋಗ, ಏಡ್ಸ್ ರೀತಿಯ ಹಲವು ಮಾರಕ ರೋಗಗಳು ಅನುವಂಶೀಯತೆಯಿಂದ ಬರುವ ಸಾಧ್ಯತೆಯಿದೆ. ಅದನ್ನು ಬಯೋಸೆನ್ಸರ್ ಪರೀಕ್ಷೆಯ ಮೂಲಕ ಆರಂಭದಲ್ಲಿಯೇ ರೋಗದ ಲಕ್ಷಣವನ್ನು ಕಂಡುಹಿಡಿಯಬಹುದು. ಇದರ ಜೊತೆಗೆ ರೋಗ ಲಕ್ಷಣ ಹೊಂದಿರುವ ವರ್ಣತಂತುವಿನ ಬದಲಾವಣೆಯನ್ನೂ ಗಮನಿಸಬಹುದು ಎಂದು ತಜ್ಞರು ಹೇಳಿದ್ದಾರೆ.

ಸಂಶೋಧಕರು ಹಲವಾರು ರೋಗಗಳಿಗೆ ಕಾರಣವಾಗುವ ವೈರಸ್, ಬ್ಯಾಕ್ಟೀರಿಯಾ ಹಾಗೂ ಫಂಗಸ್‌ಗಳ ಪ್ರಭಾವ ನಿಯಂತ್ರಿಸಲು ಬಳಸುವ ಲಸಿಕೆಗಳ ಮಾದರಿಯಲ್ಲಿ ವಂಶವಾಹಿನಿ ಕಾಯಿಲೆಗಳ ನಿಯಂತ್ರಣ ಸಾಧ್ಯತೆಗಳ ಬಗ್ಗೆಯೂ ತಜ್ಞರು ಅಧ್ಯಯನ ಕೈಗೊಂಡಿದ್ದರು. ಬಯೋಸೆನ್ಸರ್ ಮೂಲಕ ಡಿಎನ್‌ಎ ಪರೀಕ್ಷೆ ನಡೆಸಿದಾಗ ಅನುವಂಶೀಯ ಕಾಯಿಲೆಗಳ ಬೆಳವಣಿಗೆಯನ್ನು ಗುರುತಿಸುವಲ್ಲಿ ಅವರ ಅಧ್ಯಯನ ಯಶಸ್ವಿಯಾಗಿದೆ ಎಂದು ಸಂಶೋಧಕರು ಹೇಳಿದ್ದಾರೆ.

## ಶ್ವಾಸಕೋಶ ಹಾಳು ಮಾಡುವ ನೀರು!

ಖನಿಜಯುಕ್ತ ನೀರನ್ನು ಕುಡಿಯುವುದರಿಂದ ಶ್ವಾಸಕೋಶಕ್ಕೆ ಹಾನಿ ಉಂಟಾಗುತ್ತದೆ ಎಂಬ ಸಂಗತಿಯನ್ನು ನೂತನ ಅಧ್ಯಯನವೊಂದು ಹೇಳಿದೆ.

ಗರ್ಭಿಣಿಯರು ಖನಿಜ ಮಿಶ್ರಿತ ನೀರನ್ನೇ ಕುಡಿಯಲು ಬಳಸಿದರೆ, ಮುಂದೆ ಜನಿಸುವ ಮಗುವಿನ ಶ್ವಾಸಕೋಶ ಘಾಸಿಗೊಳ್ಳುವ ಸಾಧ್ಯತೆ ಎರಡುಪಟ್ಟು ಹೆಚ್ಚಾಗುತ್ತದೆ ಎಂದು ಅಧ್ಯಯನ ನಡೆಸಿದ ಆಸ್ಟ್ರೇಲಿಯಾದ ಸಂಶೋಧಕರು ಪ್ರಕಟಿಸಿದ್ದಾರೆ.

ನಿರಂತರವಾಗಿ ಖನಿಜಾಂಶವುಳ್ಳ ಗಡುಸು ನೀರನ್ನು ಕುಡಿದರೆ ಅದರಿಂದ ಉಸಿರಾಟಕ್ಕೆ ಸಂಬಂಧಿಸಿದ ದೀರ್ಘಕಾಲದ ಕಾಯಿಲೆಗಳು ಬರುವ ಸಾಧ್ಯತೆ ಕೂಡ ಅಧಿಕ ಎನ್ನುವುದು ಸಂಶೋಧಕರ ಅಭಿಮತ.

ಲೋಹದ ಅಂಶವುಳ್ಳ ನೀರು ತಕ್ಷಣದಲ್ಲಿ ಉಸಿರಾಟ ಸಂಬಂಧಿ ಕಾಯಿಲೆಗೆ ಕಾರಣವಾದರೆ, ದೀರ್ಘಕಾಲದಲ್ಲಿ ಅದು ಕ್ಯಾನ್ಸರ್‌ಗೂ ಮೂಲವಾಗುತ್ತದೆ. ತಾವು ಇಲಿಗಳ ಮೇಲೆ ನಡೆಸಿದ ಪ್ರಯೋಗದಲ್ಲಿ ಅದು ದೃಢಪಟ್ಟಿದೆ ಎಂಬ ಅಂಶವನ್ನು ಅವರು ದಾಖಲಿಸಿದ್ದಾರೆ.

## ಲಿಪ್‌ಸ್ಟಿಕ್ ಅಪಾಯ!

ತುಟಿಯಲ್ಲಿಯೂ ಬಣ್ಣದ ಬುಗ್ಗೆ ಎಬ್ಬಿಸುವ ಸೌಂದರ್ಯ ಆರಾಧಕ ಮಹಿಳೆಯರಿಗೆ, ತುಟಿಗೆ ಹಚ್ಚುವ ಬಣ್ಣದಲ್ಲಿ ಅಪಾಯಕಾರಿ ವಿಷವಿದೆ ಎಂದು ಲಂಡನ್ ತಜ್ಞರು ಎಚ್ಚರಿಕೆಯನ್ನು ನೀಡಿದ್ದಾರೆ.

ಅಧರ ಅಂದವಾಗಿ ಕಾಣಬೇಕು. ರಂಗುರಂಗಿನಿಂದ ಕಂಗೊಳಿಸಬೇಕು ಎಂದು ತರಾವರಿಯ ತುಟಿಚೂರ್ಣ ಹಚ್ಚುತ್ತಾ ಹೋದರೆ, ನಿಮ್ಮ ಜ್ಞಾಪಕ ಶಕ್ತಿ ಕುಂದುತ್ತಾ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ತುಟಿಗೆ 'ಲಿಪ್‌ಸ್ಟಿಕ್' ಮುಖ್ಯವೋ ಇಲ್ಲವೇ ಮೆದುಳಿನ ಕಾರ್ಯಕ್ಷಮತೆ ಮುಖ್ಯವೋ ಎಂದು ಮಹಿಳೆಯರು ಯೋಚಿಸಬೇಕು ಎಂದು ಸಂಶೋಧಕರು ಭೀತಿಯ ಪ್ರಶ್ನೆಯೊಂದನ್ನು ಮುಂದಿಟ್ಟಿದ್ದಾರೆ.

ಸಂಶೋಧಕರು 22 ಕಂಪೆನಿಗಳ ಬಗೆ ಬಗೆಯ ತುಟಿಚೂರ್ಣಗಳನ್ನು ಅಧ್ಯಯನಕ್ಕೆ ಬಳಸಿದ್ದರು. ಅದರಲ್ಲಿ ವಿಷಯುಕ್ತ ಬಣ್ಣದ ಅಂಶ ಇರುವುದನ್ನು ಗುರುತಿಸಿದ್ದಾರೆ. ಬಣ್ಣದಲ್ಲಿ ಇರುವ 'ಸೀಸ' ಮಂದಗತಿಯಲ್ಲಿ ಉದರವನ್ನು ಸೇರಿದರೆ, ಅದರಿಂದ ಜ್ಞಾಪಕ ಶಕ್ತಿ, ಕಲಿಯುವ ಸಾಮರ್ಥ್ಯ ಕುಂಠಿತವಾಗುತ್ತದೆ ಎನ್ನುವುದು ತಜ್ಞರ ವಾದ. ಬಣ್ಣದಲ್ಲಿನ ವಿಷಯುಕ್ತ ಅಂಶ ಕ್ರಮೇಣ ಮಾನಸಿಕ ಆರೋಗ್ಯವನ್ನೂ ಘಾಸಿಗೊಳಿಸುತ್ತದೆ. ಆದ್ದರಿಂದ ಲಿಪ್‌ಸ್ಟಿಕ್ ಹಚ್ಚುವ ಮುನ್ನ ಯೋಚಿಸಿ ಎನ್ನುವುದು ಅವರ ಸಲಹೆ.

–ಟಿಪ್ಸ್

ನಕ್ಕುಬಿಡಿ



### ಶಿಕ್ಷೆ ಯಾಕೆ?

ಬೆಂಕಿ ಹತ್ತಿ ಉರಿಯುತ್ತಿದ್ದ ಮನೆಯೊಳಗಿನಿಂದ ಆರು ಜನರನ್ನು ಗುಂಡ ಅತಿ ಸಾಹಸದಿಂದ ಹೊರಗೆಳೆದು ಹಾಕಿದ. ಆದರೂ ಆತನಿಗೆ ಜೈಲು ಶಿಕ್ಷೆಯಾಯಿತು. ಯಾಕೆ ಗೊತ್ತೆ?

ಏಕೆಂದರೆ ಆ ಆರೂ ಮಂದಿ ಅಗ್ನಿಶಾಮಕ ದಳದ ಸಿಬ್ಬಂದಿಗಳಾಗಿದ್ದರು!

★★★

### ಸ್ವ-ರಕ್ಷಣೆ

ಕೆಲವು ಶಿಕ್ಷಕರು ಏಕೆ ಸನ್ ಗ್ಲಾಸ್‌ಗಳನ್ನು ಧರಿಸುತ್ತಾರೆ?
ಏಕೆಂದರೆ ಅವರ ವಿದ್ಯಾರ್ಥಿಗಳು ತುಂಬಾ ಬ್ರೈಟ್ ಆಗಿರುತ್ತಾರೆ!

★★★

### ಅವಶ್ಯಕತೆಯಿಲ್ಲ

ಟೀಚರ್: ಗೋಪಿ ನಿಜ ಹೇಳು, ಊಟ ಮಾಡುವ ಮೊದಲು ನೀನು ಪ್ರಾರ್ಥನೆ ಮಾಡುವೆ ತಾನೆ?

ಗೋಪಿ: ಇಲ್ಲ ಟೀಚರ್.

ಟೀಚರ್: ಏಕಿಲ್ಲ?

ಗೋಪಿ: ನನಗದರ ಅವಶ್ಯಕತೆಯಿಲ್ಲ; ನನ್ನಮ್ಮ ಚೆನ್ನಾಗಿ ಅಡುಗೆ ಮಾಡ್ತಾರೆ!

★★★



### ಶಾಲೆಗಾಗಿ!

ಟೀಚರ್: ನೀನೇಕೆ ಇಂದು ಶಾಲೆಗೆ ತಡವಾದೆ?

ಗೋಪಿ: ಬೆಳಗಿನ ಜಾವ ನಾನು ನಮ್ಮ ಶಾಲಾ ಟೀಮಿನ ಪರವಾಗಿ ಫುಟ್ ಬಾಲ್ ಪಂದ್ಯ ಆಡುತ್ತಿರುವ ಕನಸು ಕಾಣುತ್ತಿದ್ದೆ. ಆ ಪಂದ್ಯ ಹೆಚ್ಚುವರಿ ಕಾಲಾವಧಿಗೆ ಮುಂದುವರಿಯಿತು!

ಸಂಗ್ರಹ: ರಮಣ್‌ಶೆಟ್ಟಿ ರೆಂಜಾಳ್, ಮುಂಬೈ